ವಿಶೇಷ ಹಕ್ಕುಗಳನ್ನು ನೀಡಲಾಗಿದೆ. ಈ ಜಮೀನುಗಳನ್ನು ಸೇವಾ ಜಮೀನು (Service lands) ಗಳೆಂತಲೂ ಕರೆಯುವುದು ವಾಡಿಕೆಯಲ್ಲಿದೆ. ಏಕೆಂದರೆ ಈ ಜಮೀನುಗಳು ಬಾಜು ತರಿ ಜಮೀನುಗಳಿಗೆ ಪ್ರಯೋಜನ ಜಮೀನುಗಳಾಗಿರುತ್ತವೆ.

ಭೂ ಕಂದಾಯ ಅಧಿನಿಯಮ 1964ರ ವಿಧಿ 94ಎ ಮತ್ತು ಅದಕ್ಕೆ ಸಂಬಂಧಪಟ್ಟ ಭೂ ಕಂದಾಯ ನಿಯಮಗಳ ಪ್ರಕಾರ ರೂಪಿಸಿರುವ ಸರ್ಕಾರಿ ಜಮೀನುಗಳ ಅಕ್ರಮ ಸಾಗುವಳಿಯನ್ನು ಸಕ್ರಮಣೀಕರಿಸುವ ಯೋಜನೆಯಡಿಯಲ್ಲಿ, ಕುಮ್ಕಿ ಜಮೀನುಗಳ ಅಕ್ರಮ ಸಾಗುವಳಿಯನ್ನು ಸಕ್ರಮೀಕರಿಸಲು ಅವಕಾಶವಿರುವುದಿಲ್ಲ. ಭೂ ಕಂದಾಯ ಅಧಿನಿಯಮ 1964ರ ವಿಧಿ 79(2)ರ ಪರಿಮಿತಿಯಲ್ಲಿ ಬರುವ ಎಲ್ಲಾ ವಿಶೇಷ ಹಕ್ಕುಗಳುಳ್ಳ (ಕುಮ್ಕಿ ಇತ್ಯಾದಿ) ಜಮೀನುಗಳ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಕೂಡದೆಂಬ ನಿರ್ಭಂಧವನ್ನು ಭೂ ಕಂದಾಯ ಅಧಿನಿಯಮ 1964ರ ವಿಧಿ 94ಎ ರಲ್ಲಿ ವಿಧಿಸಿದೆ.

1.20 ಪಿ.ಎಂ

2 ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ರಚಿಸಲಾಗಿರುವ ರಬ್ಬರ್ ಬೆಳೆಗಾರರ ಸಹಕಾರಿ ಸಂಘದ ಮೇಲೆ ವಹಿವಾಟು ತೆರಿಗೆ ವಿಧಿಸಿರುವುದರಿಂದ ಉಂಟಾಗಿರುವ ತೊಂದರೆ.

ಶ್ರೀ ಕೆ.ಗಂಗಾಧರಗೌಡ: (ಬೆಳ್ತಂಗಡಿ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ರಬ್ಬರ್ ಬೆಳೆಗಾರರ ಸಹಕಾರಿ ಸಂಘವನ್ನು ಪ್ರಥಮವಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ರಚಿಸಲಾಗಿದೆ. ಈ ಸಂಘವು ರಬ್ಬರ್ ಬೆಳೆಗಾರರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಹಲವಾರು ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ, ಹಣಕಾಸು ಇಲಾಖೆಯವರು "ವಹಿವಾಟು ತೆರಿಗೆ "ಯನ್ನು ಈ ಸಂಘದ ಮೇಲೆ ಹೇರಿದ ಪರಿಣಾಮವಾಗಿ ತುಂಬಾ ಕಷ್ಟನಷ್ಟಕ್ಕೆ ಗುರುಯಾಗಿದೆ. ನಮ್ಮ ನೆರೆ ರಾಜ್ಯವಾದ ಕೇರಳದಲ್ಲಿ ರಬ್ಬರ್ ಬೆಳೆಗಾರರ ಸಂಘಕ್ಕೆ ವಹಿವಾಟು ತೆರಿಗೆಯನ್ನು ಹೇರಿಲ್ಲ. ಆದರೆ, ರಬ್ಬರ್ ಬೆಳೆ ಆರಂಭ ಮಾಡುತ್ತಿರುವ ನಮ್ಮ ರಾಜ್ಯದ ರೈತರಿಗೆ ಪ್ರೋತ್ಸಾಹ ಕೊಡುವ ಬದಲು ವಹಿವಾಟು ತೆರಿಗೆ ಹೇರಿ ಉತ್ಸಾಹ ಕುಂಠಿತವಾಗಿದೆ. ಆದುದರಿಂದ. ರಬ್ಬರ್ ಬೆಳೆಗಾರರ ಸಹಕಾರಿ ಸಂಘದ ಮೇಲೆ ವಿಧಿಸಿದ ವಹಿವಾಟು ತೆರಿಗೆಯನ್ನು ಕೇರಳ ರಾಜ್ಯದಲ್ಲಿರುವಂತೆ ವಿನಾಯಿತಿಗೊಳಿಸಬೇಕಾಗಿ ಹಣಕಾಸು ಮಂತ್ರಿಗಳನ್ನು ವಿನಂತಿಸುತ್ತೇನೆ.

(ಶ್ರೀ ಡಿ.ಎ. ಚೆನ್ನಪ್ಪನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್.ಬಂಗಾರಪ್ಪ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೆ, ರಬ್ಬರ್ ಬೆಳೆಗಾರರ ಸಹಕಾರ ಸಂಘ, ರಾಜ್ಯ ಮಾರಾಟ ತೆರಿಗೆ ಅಧಿ ನಿಯಮಕ್ಕೆ ಒಳಪಡುತ್ತದೆ. ಅವರು ಮಾಡಿರತಕ್ಕಂಥ ವಾರ್ಷಿಕ ವಹಿವಾಟು 10 ಲಕ್ಷ ಮೀರಿದಲ್ಲಿ ಆ ವಹಿವಾಟಿಗೆ ಶೇಕಡ 1.25 ರಷ್ಟು ವಹಿವಾಟು ತೆರಿಗೆಯನ್ನು ಕೊಡಬೇಕಾಗುತ್ತದೆ (ಶೇಕಡ 1.75 ರಷ್ಟು ಅವರ ವಹಿವಾಟು 200 ಲಕ್ಷ ರೂಪಾಯಿಗಳಿಗೆ ಮೀರಿದ್ದ ಪಕ್ಷದಲ್ಲಿ). ಆದರೆ, ಮೇಲ್ಕಂಡ ಸಹಕಾರ ಸಂಘವು ಬೆಳೆಗಾರರ ಪರವಾಗಿ ದಳ್ಳಾಳಿ ಏಜೆಂಟರಾಗಿ ರಬ್ಬರನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಆ ವಹಿವಾಟಿಗೆ "ವಹಿವಾಟು ತೆರಿಗೆ" ಇರುವುದಿಲ್ಲ.

ಮೇಲೆ ಸೂಚಿಸಿದ ಸಹಕಾರ ಸಂಘದ ವ್ಯವಹಾರದ ವಿವರಗಳು ತಕ್ಷಣ ಲಭ್ಯವಿಲ್ಲದ ಕಾರಣ,ಅವರು ವಹಿವಾಟು ತೆರಿಗೆಗೆ ಒಳಪಡುತ್ತಾರೋ, ಇಲ್ಲವೋ, ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಲು ಸಾಧ್ಯವಿರುವುದಿಲ್ಲ.

ನೆರೆ ರಾಜ್ಯವಾದ ಕೇರಳದಲ್ಲಿ ಇಂತಹ ಸಂಸ್ಥೆಗಳಿಗೆ ವಹಿವಾಟು ತೆರಿಗೆ ಇದೆಯೋ ಇಲ್ಲವೋ ಎಂದು ತಿಳಿದು ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

3. ಪ್ರವಾಸಿ ಕೇಂದ್ರವಾದ ಶ್ರೀರಂಗಪಟ್ಟಣದ ಸ್ವಚ್ಛತೆ ಕಾಪಾಡಿಕೊಳ್ಳುವ ಸಲವಾಗಿ ಶ್ರೀರಂಗಪಟ್ಟಣ ಮುನಿಸಿಪಾಲಿಟಿಗೆ ವಿಶೇಷ ಧನ ಸಹಾಯ ಮಾಡುವ ಬಗ್ಗೆ.

SMT. DAMAYANTI BOREGOWDA: (Srirangapatna):- Sir, Srirangapatna Town Municipality doesnot deriveany financial gainsfrom Tourism. But, it has to provide the minimum facilities to the Tourists. In our State, the highest number of tourists visist Srirangapatna. As such, the Government should come to the rescue of the Municipality. I request the Hon'ble Minister to sanction a special grant of five lakhs of rupees to the Town Muncipality of Srirangapatna to maintain the cleanliness of the Tourist Centre, augment the water supply and to provide additional lights in tourism points.

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ಶ್ರೀರಂಗಪಟ್ಟಣ ಪುರಸಭೆಯ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಜಿಲ್ಲಾಧಿಕಾರಿಗಳಿಂದ ಶಾಕರಿಂದ ಮತ್ತು ಪುರಸಭೆಯಿಂದ ಹಣ ಬಿಡುಗಡೆ ಮಾಡುವಂತೆ ಮನವಿಗಳು ಸರ್ಕಾರಕ್ಕೆ ಬಂದಿರುತ್ತವೆ. ಈ ತಿಂಗಳ ಅಂತ್ಯದೊಳಗಾಗಿ ನಗರ ಪುರಸಭೆಗಳ ಅಭಿವೃದ್ಧಿ ಕಾರ್ಯಗಳಿಗಾಗಿ ವಿವೇಚನಾತ್ಮಕ ಅನುದಾನದಿಂದ ಶ್ರೀರಂಗಪಟ್ಟಣಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

4. ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ತಹಶೀಲ್ದಾರ್‌ರವರ ಮೇಲಿನ ಆಪಾದನೆಗಳ ಕುರಿತು.

ಶ್ರೀ ಆರ್.ಬಿ.ತಿಮ್ಮಾಪುರ: (ಮುಧೋಳ):- ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ತಹಶೀಲ್ದಾರ ಶ್ರೀ ಮಲ್ಲಾಪುರ, ಇವರು ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಹಾಗೂ ಹಕ್ಕು ಪತ್ರಗಳಿಗೆ ಸಹಿ ಮಾಡಿ ವಿತರಣೆ ಮಾಡದೆ ತನ್ನ ಮನ ಬಂದಂತೆ ಬಡವರ ದುಡ್ಡು ನುಂಗಿ ಕೇವಲ ಹಣ ಕೊಟ್ಟವರಿಗೆ ಮಾತ್ರ ಹಕ್ಕು ಪತ್ರ ವಿತರಣೆ ಮಾಡುತ್ತಿದ್ದಾನೆಂದು ಗುಮಾನಿ ಬಂದಿದೆ. ಇದಲ್ಲದೆ, 'ಟಾಸ್ಕ್‌ಫೋರ್ಸ್ ಕಮಿಟಿ' ಯ ಅಧ್ಯಕ್ಷರಿಗೆ ಹಕ್ಕುಪತ್ರಗಳನ್ನು ಹಂಚುವ ಅಧಿಕಾರವಿಲ್ಲವೆಂದು ಅಪಪ್ರಚಾರ ಮಾಡುತ್ತಿದ್ದಾನೆ. ಹಾಗೂ ಕಮಿಟಿಯ ಆಯ್ಕೆ ಮಾಡಿದ ಫಲಾನುಭವಿಗಳ ಹೆಸರನ್ನು ಬದಲಾಯಿಸಿದ್ದಾನೆ.

ನಮೂನೆ 3 ರಲ್ಲಿ ಸಂಗ್ರಹಿಸಿದ ಯಾದಿ ದೋಷಪೂರಿತವಾಗಿದ್ದು ಅದನ್ನು ಸರಿಪಡಿಸಿ ಎಂದು ಲಾಸ್ಕ್ ಫೋರ್ಸ್ ಕಮಿಟಿಯು ತಿಳಿಸಿದರೆ ಒಪ್ಪದೆ ತನ್ನದೇ ಆದ ಅಕ್ರಮ ನೀತಿಯನ್ನು ಅನುಸರಿಸಿ ಆ ದೋಷಪೂರಿತ ಯಾದಿಯಲ್ಲಿರುವವರನ್ನು ಫಲಾನುಭವಿಗಳಾಗಿ ಆಯ್ಕೆ ಮಾಡಬೇಕೆಂದು ಕಮಿಟಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದಾನೆ.

ಒಟ್ಟಿನಲ್ಲಿ ಆಶ್ರಯ ಯೋಜನೆಯ ಹೆಸರಿನಲ್ಲಿ ಸಿಕ್ಕಾಪಟ್ಟೆ ಹಣ ವಸೂಲಿ ಮಾಡಿ ಬಡವರಿಗೆ ತೊಂದರೆ ಕೊಡುತ್ತಿದ್ದಾನೆ. ಇದಲ್ಲದೆ ನನ್ನ ಸ್ವಂತ ಊರಾದ ಊತ್ತೂರಿನಲ್ಲಿ ಸಾಕಷ್ಟು ಸರ್ಕಾರಿ ಜಮೀನು ಲಭ್ಯವಿದ್ದು, ದುರುದ್ದೇಶದಿಂದ ಅದು ಸರ್ಕಾರಿ ಭೂಮಿ ಅಲ್ಲವೆಂದು ಸುಳ್ಳು